ಹೆಚ್ಚಿನ ಕೌಶಲ ಸಾಧಿಸಿದವರು ಮಾರುಕಟ್ಟೆಗಳಲ್ಲಿ ಅಂಗಡಿ-ಮುಂಗಟ್ಟುಗಳನ್ನು ಹಾಕಿ ವಾಣಿಜ್ಯ-ವ್ಯವಹಾರಕ್ಕೆ ತೊಡಗುವ ಉದಾಹರಣೆಗಳು, ಅಂಥವರು ಎದುರಿಸಿದ ಪೈಪೋಟಿ, ಕಷ್ಟ ಕಾರ್ಪಣ್ಯಗಳನ್ನು ದೊರೈರಾಜ್ ವಿವರಿಸುತ್ತಾರೆ. ಈ ಗದ್ಯಭಾಗಗಳು ಹೋರಾಟದ ಹಾಡಾಗಿ ಅತ್ಯಂತ ಜನಪ್ರಿಯವಾಗಿರುವ 'ನನ್ನ ಜನಗಳು' ಕವಿತೆಗೆ ಒಂದು ಜೀವಂತಿಕೆಯನ್ನು, ಅಥೆಂಟಿಸಿಟಿಯನ್ನು, ಸುದೀರ್ಘ ಮತ್ತು ಸಮರ್ಥವಾದ ಭಾಷ್ಯವನ್ನು ಒದಗಿಸಿದಂತಿವೆ.

ಎಲ್ಲ ದೃಷ್ಟಿಯಿದಲೂ ಈ ಹಟ್ಟಿ ಸ್ವತಂತ್ರ ಮತ್ತು ಸ್ವಾವಲಂಬಿಯಾಗಿ ಬಾಳಿದೆ. ಹಸಿವು, ಬಡತನಗಳ ಜೊತೆಜೊತೆಯಲ್ಲಿ ನ್ಯಾಯ ಪಂಚಾಯತಿ, ಸಾಮೂಹಿಕ ಸಾಂಸ್ಕೃತಿಕ ಚಟುವಟಿಕೆ, ಶಿಕ್ಷಣದ ಅರಿವು ಇತ್ಯಾದಿ ಪ್ರಗತಿಪರ ದಾರಿಯಲ್ಲಿ ಸಾಗಿರುವ ಇತಿಹಾಸವಿದೆ. ಬೇರೆಬೇರೆ ವೃತ್ತಿಗಳನ್ನು ಮಾಡುವವರು ತಮ್ಮತಮ್ಮ ವೃತ್ತಿಗಳನ್ನು ಇನ್ನೂ ಹೆಚ್ಚು ವೃತ್ತಿಪರತೆಯಿಂದ ವಿಸ್ತರಿಸಿಕೊಂಡು ಆರ್ಥಿಕ ಚೈತನ್ಯವನ್ನು ಸಾಧಿಸಬೇಕೆಂಬ ಹಂತಗಳಲ್ಲಿ, ಸರ್ಕಾರಗಳು ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ಜಾರಿಗೊಳಿಸುವ ಉದ್ದಿಮೆಗಳು ಹಟ್ಟಿ ಜನರ ಪಾರಂಪರಿಕ ಕಾಯಕಗಳನ್ನು ನುಂಗಿ ಹಾಕಿರುವ ದುರಂತ ಚಿತ್ರಣಗಳು ಇಲ್ಲಿ ದಾಖಲಾಗಿವೆ.

ಈ ಹಟ್ಟಿ ವಸಾಹತು ಕಾಲದಿಂದಲೂ ಅಸ್ತಿತ್ವದಲ್ಲಿರುವ ಸೂಚನೆಗಳನ್ನು ಇದೇ ಜಿಲ್ಲೆಯ ಲೇಖಕರಾದ ತುಂಬಾಡಿ ರಾಮಯ್ಯ, ರವಿಕುಮಾರ್ ನೀಹ ಅವರ ಕಾದಂಬರಿಗಳಲ್ಲಿ ('ನೀಗೊನಿ') ಗುರುತಿಸಬಹುದು. ವಸಾಹತು ಕಾಲದಲ್ಲೇ ಇದ್ದಂತಹ ಈ ಹಟ್ಟಿಯ ಇತಿಹಾಸದಲ್ಲಿ ಎರಡು ಘಟನೆಗಳು ಮುಖ್ಯವೆನಿಸುತ್ತವೆ. ಒಂದು, ಸ್ವಾತಂತ್ರ್ಯ ಸಂಗ್ರಾಮದ ದಿನಗಳಲ್ಲಿ ಮಹಾತ್ಮ ಗಾಂಧೀಜಿಯವರು ತುಮಕೂರಿಗೆ 1934ರಲ್ಲಿ ಬಂದಾಗ, ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮದ ಅಂಗವಾಗಿ ಹತ್ತಿರದ ಯಾವುದಾದರೂ ಒಂದು ಹರಿಜನ ಕೇರಿಗೆ ಭೇಟಿ ಕೊಡುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾರೆ. ಆಗ ಅವರನ್ನು ಈ 'ದೊಡ್ಡಹಟ್ಟಿ'ಗೆ ಕರೆದೊಯ್ಯಲಾಗುತ್ತದೆ. ಆನಂತರದ ದಿನಗಳಲ್ಲಿ ತುಮಕೂರಿನ ಗಾಂಧೀವಾದಿಗಳಲ್ಲಿ ಕೆಲವರು ಹಟ್ಟಿಯ ಸಂಪರ್ಕವಿಟ್ಟುಕೊಳ್ಳುವುದು ಒಂದು ಮೈಲಿಗಲ್ಲು. ದೊರೈ ಅವರೇ ಉಪಸಂಹಾರ ಪುಟಗಳಲ್ಲಿ ಹೀಗೆ ಬರೆಯುತ್ತಾರೆ, 'ನಮ್ಮ ಹಟ್ಟಿಯವರು ಕೈಗೊಂಡ ಎಲ್ಲ ಹೋರಾಟಗಳೂ ಗಾಂಧೀಜಿ ನಿರಂತರವಾಗಿ ಪ್ರತಿಪಾದಿಸುತ್ತಿದ್ದ ಅಹಿಂಸೆ, ಪ್ರಾಮಾಣಿಕತೆ ಮತ್ತು ಸತ್ಯದ ಹಳಿಗಳ ಮೇಲೆಯೇ ಸಾಗುತ್ತಿತ್ತು ಮತ್ತು ಹೆಚ್ಚು ಪ್ರಜಾಸತ್ತಾತ್ಮಕವಾಗಿರುತ್ತಿತ್ತು. ಇದು ನಮ್ಮ ಹಟ್ಟಿ ಗಾಂಧೀಜಿಯವರಿಂದ ಕಲಿತ ಪಾಠ.'

ಇನ್ನೊಂದು ಮೈಲಿಗಲ್ಲು, ದೊರೈರಾಜ್ ಅವರು ಎಪ್ಪತ್ತರ ದಶಕದಲ್ಲಿ ಸ್ನಾತಕೋತ್ತರ ವಿದ್ಯಾಭ್ಯಾಸವನ್ನು ಮೈಸೂರಿನಲ್ಲಿ ಮುಗಿಸಿ ಬಂದು ಹಟ್ಟಿಯಲ್ಲಿ 'ದಲಿತ ಯುವಕ ಸಂಘ' ಕಟ್ಟಿ ಹಟ್ಟಿಯ ಅಗತ್ಯಗಳ ಮತ್ತು ಅಭಿವೃದ್ಧಿಯ ಬಗೆಗೆ ಕಾರ್ಯೋನ್ಮುಖರಾಗುವುದು. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ತಾತ್ವಿಕ ಚಿಂತನೆಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ ಮತ್ತು ಆ ವೇಳೆಗೆ ದೇವನೂರ ಮಹಾದೇವ, ಬಿ. ಕೃಷ್ಣಪ್ಪ ಇಂಥವರು ಆರಂಭಿಸಿದ್ದ ಹೋರಾಟಗಳನ್ನು ಇವರು ಹತ್ತಿರದಿಂದ ಅವಲೋಕಿಸುತ್ತಾರೆ. ಆದರೂ ಅವರೇ ಕಟ್ಟಿದ್ದ ಯುವಕ ಸಂಘ ಸಾಕಷ್ಟು ಪ್ರಬಲವಾಗಿದ್ದು ಅನೇಕ ಸ್ಥಳೀಯ ಸಮಸ್ಯೆಗಳನ್ನು ಯಶಸ್ವಿಯಾಗಿ ಎದುರಿಸುತ್ತಾರೆ. ಹಟ್ಟಿಯ ಪಕ್ಕದಲ್ಲಿದ್ದ ಜಮೀನಿನ ಮೇಲೆ ಭೂಗಳ್ಳರ ಕಣ್ಣು ಬಿದ್ದಾಗ ಹೋರಾಟದ ಮೂಲಕ ಹಟ್ಟಿಯ ನಿವಾಸಿಗಳಿಗೆ ನಿವೇಶನಗಳನ್ನು ಒದಗಿಸಿ ಕೊಡುತ್ತಾರೆ. ಮಂಡಿಪೇಟೆಯಲ್ಲಿ ಹಮಾಲಿಗಳ ಸಂಘ ಸ್ಥಾಪನೆ ಮಾಡುತ್ತಾರೆ. ತುಮಕೂರು ಪುರಸಭೆ, ನಗರಸಭೆಗಳಿಗೆ ಹಟ್ಟಿಯಿಂದ ಚುನಾಯಿತ ಪ್ರತಿನಿಧಿಗಳ ಆಯ್ಕೆಯಾಗುತ್ತದೆ. ಶಿಕ್ಷಣಕ್ಕೆ, ಸ್ವಚ್ಛತೆಗೆ ಆದ್ಯತೆ ಇತ್ಯಾದಿ ಅನೇಕ ಅಭಿವೃದ್ಧಿ ಕೆಲಸಗಳಲ್ಲಿ ತಮ್ಮ ಹಟ್ಟಿಯ ಸಂಗಾತಿಗಳ ಜೊತೆಗೆ ದೊರೈರಾಜ್ ನಿಜವಾದ ಅರ್ಥದಲ್ಲಿ ದುಡಿಯುತ್ತಾರೆ.

ತಮ್ಮ ಸಮುದಾಯದ ಉನ್ನತಿಗೆ, ಅಸ್ಪೃಶ್ಯ ಕೂಪದ ವಿಮೋಚನೆಗೆ ಅವರ ಬದ್ಧತೆ ಅಚಲವಾದುದು. ಸ್ನಾತಕೋತ್ತರ ಶಿಕ್ಷಣದ ನಂತರ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಅಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಉಪನಿರ್ದೇಶಕರಾಗಿ, ಜಂಟಿ ನಿರ್ದೇಶಕರಾಗಿ ಬೇರೆಬೇರೆ ಊರುಗಳಲ್ಲಿ ನೌಕರಿ ಮಾಡುತ್ತಿದ್ದರೂ ವಾರಾಂತ್ಯಗಳಲ್ಲಿ ಹಟ್ಟಿಗೆ ತಪ್ಪದೇ ಬಂದು ಸಂಘದ